ಪಿ ಡಬ್ಲ್ಯೂ-1

ಸಾಕ್ಷಿಯನ್ನು ದಿಃ 06.06.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಟಿ ಎಂ ವಕೀಲರಿಂದಃ**

ದಾವಾ ಐಟಂ ನಂ.2 ಆಸ್ತಿಯು ಕೃಷಿಯೇತರ ಭೂಮಿಯಾಗಿ ಯಾರ ಹೆಸರಿಗೆ ಪರಿವರ್ತನೆಯಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ದಾಖಲಾತಿಗೆ ಅರ್ಜಿ ಕೊಟಿದ್ದೇವೆ ಇನ್ನೂ ಸಿಕ್ಕಿಲ್ಲ ಎಂದು ಹೇಳುತ್ತಾರೆ. 2002 ನೇ ಇಸವಿಯಲ್ಲಿ ಭೂ ಪರಿವರ್ತನೆ ಆಗಿರುತ್ತದೆ. 2008-09 ರಲ್ಲಿ ಐಟಂ ನಂ-3 ಭೂ ಪರಿವರ್ತನೆ ಆಗಿದೆ. ಯಾರ ಹೆಸರಿನಲ್ಲಿ ಭೂ ಪರಿವರ್ತನೆ ಆಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.3 ಮತ್ತು 4 ಒಂದೇ ಬಾರಿ 2008-09 ರಲ್ಲಿ ಪರಿವರ್ತನೆ ಆಗಿರುತ್ತದೆ. ಐಟಂ ನಂ.5 ಲಕ್ಕವ್ವನಹಳ್ಳಿ ಗ್ರಾಮಕ್ಕೆ ಸೇರಿದ ಆಸ್ತಿ ಆಗಿರುತ್ತದೆ. ನಮ್ಮ ಕುಟುಂಬಕ್ಕೆ ಐಟಂ ನಂ.5 ರ ಆಸ್ತಿಯಲ್ಲಿ 33 ಎಕರೆ 34 ಗುಂಟೆ ಇದೆ. ದಾವಾ ಐಟಂ ನಂ.5 ರಲ್ಲಿ ದಾವಾ ಆಸ್ತಿಯ ವಿಸ್ತೀರ್ಣವನ್ನು ಹೊರತು ಪಡಿಸಿ ಉಳಿದ 11 ಎಕರೆ ಆಸ್ತಿಯು ನನ್ನ ತಂದೆ ಓಬನಾಯಕನ ಹೆಸರಿನಲ್ಲಿ ಇದೆ.

ನಮ್ಮ ತಂದೆಗೆ 11 ಎಕರೆ ಆಸ್ತಿಯು ಮರಣ ಶಾಸನದ ಮೂಲಕ ಬಂದಿರುತ್ತದೆ. ಸದರಿ ಮರಣ ಶಾಸನವು ನೊಂದಣಿಯಾಗಿರುವುದಿಲ್ಲ. ಆ ಮರಣ ಶಾಸನದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಮರಣ ಶಾಸನದಲ್ಲಿ ಇನ್ನು 3 ಆಸ್ತಿಗಳು ಬಂದಿದ್ದು ಅವುಗಳ ಸರಿಯಾದ ನಂಬರ್ ಗೊತ್ತಿಲ್ಲ. ಅವು ಸರ್ವೆ ನಂ.64/5, 85/3, 84/2 ಆಗಿರಬಹುದು . ನಮ್ಮ ತಂದೆಗೆ ನನ್ನ ತಾತ ಮರಣ ಶಾಸನ ಬರೆದಿರುತ್ತಾರೆ.

ನನ್ನ ತಂದೆಯ ತಂದೆ ಅಂದರೆ ತಾತನ ಹೆಸರು ಯರಿಜೋಗನಾಯಕ. ನಿಪಿ-22 ರಿಂದ 25, 27 ರ ಪಹಣಿ ಪತ್ರಿಕೆಯಲ್ಲಿ ನಮೂದಿಸಿದ ಯರಿಜೋಗನಾಯಕ ಎಂಬುವವರು ನನ್ನ ತಾತನಾಗಿರುತ್ತಾರೆ. ನಿಪಿ-22 ರಿಂದ 25, 27 ದಾಖಲಾತಿಗಳಲ್ಲಿ ಹೆಸರು ಹಕ್ಕು ವಿಭಜನೆಯ

ಆಧಾರದ ಮೇಲೆ ಬದಲಾವಣೆಯಾಗಿರುತ್ತದೆ. ಸರ್ವೆ ನಂ.284/2 ರ 1 ಎಕರೆ 5 ಗುಂಟೆಗೆ ಚಕ್ಕು ಬಂದಿ ಹೇಳಬಲ್ಲೆ. ಅದರ ಪೂರ್ವಕ್ಕೆ ಬಾಬು ರಾವ್ ಜಮೀನು ಪಶ್ಚಿಮಕ್ಕೆ ಗಿಡ್ಡಲಿಂಗಪ್ಪನವರ ಜಮೀನು, ಉತ್ತರಕ್ಕೆ ಪಾರ್ವತಜ್ಜಿ ಜಮೀನು ದಕ್ಷಿಣಕ್ಕೆ ನಮ್ಮದೇ ಉಳಿಕೆ ಜಮೀನು ಇದೆ. ಸರ್ವೆ ನಂ.284/2 ರ ದಕ್ಷಿಣಕ್ಕೆ ಇರುವ ಆಸ್ತಿಯು ಮೊದಲು ನಮ್ಮ ತಂದೆ ಹೆಸರಿನಲ್ಲಿ ಇತು. ಮರಣ ಶಾಸನದ ಮೂಲಕ ಸದರಿ ಜಮೀನು ನನ್ನ ತಂದೆ ಹೆಸರಿಗೆ ಬಂದಿತ್ತು.

ಸರ್ವೆ ನಂ.64/5 ರ 4 ಎಕರೆ 13 ಗುಂಟೆ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಶ್ರೀಕಂಠಯ್ಯನವರ ಜಮೀನು, ಉತ್ತರಕ್ಕೆ ಅದೇ ಸರ್ವೆ ನಂಬರ್ ನ ಉಳಿಕೆ ಭಾಗ, ದಕ್ಷಿಣಕ್ಕೆ ಸತ್ಯನಾರಾಯಣಶೆಟ್ಟಿ ಜಮೀನು ಇದೆ. ಸರ್ವೆ ನಂ.64/5 ರ ಉತ್ತರಕ್ಕಿರುವ ಆಸ್ತಿಯು ನನ್ನ ತಂದೆಗೆ ಮರಣ ಶಾಸನದ ಮೂಲಕ ನನ್ನ ತಾತ ಕೊಟಿದ್ದಾರೆ. ದಾವಾ ಐಟಂ ನಂ.3 ಮತ್ತು 4 ರ ಒಟ್ಟು ಚಕ್ಕು ಬಂದಿ ಪೂರ್ವಕ್ಕೆ ಸಾರ್ಯಾ ನಾಯಕರವರ ಜಮೀನು, ಪಶ್ಚಿಮಕ್ಕೆ ಅಂಜಿನಪ್ಪನವರ ಜಮೀನು, ಉತ್ತರಕ್ಕೆ ರುದ್ರಪ್ಪನವರ ಜಮೀನು, ದಕ್ಷಿಣಕ್ಕೆ ರಾಮಜೋಗನಾಯಕ್ ರವರ ಜಮೀನು ಇದೆ. ರಾಮಜೋಗನಾಯಕ್ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟವರಲ್ಲ.

ದಾವಾ ಐಟಂ ನಂ.5 ರ ಪೂರ್ವಕ್ಕೆ ಗೋಮಾಳ ಜಮೀನು, ಪಶ್ಚಿಮಕ್ಕೆ ಗೌಸ್ ಸಾಬ್ ರವರ ಜಮೀನು, ಉತ್ತರಕ್ಕೆ ಅದೇ ಸರ್ವೆ ನಂಬರ್ ನ ನಮ್ಮ ಉಳಿಕೆ ಜಮೀನು , ದಕ್ಷಿಣಕ್ಕೆ ರಸ್ತೆ ಇರುತ್ತದೆ. ಉತ್ತರಕ್ಕಿರುವ ಉಳಿಕೆ ಜಮೀನು ನಮ್ಮ ತಾತನಿಂದ ನನ್ನ ತಂದೆಗೆ ಮರಣ ಶಾಸನದ ಮೂಲಕ ಬಂದಿರುತ್ತದೆ. ಸದರಿ ಮರಣ ಶಾಸನವನ್ನು ನಾನು ನೋಡಿಲ್ಲ.

ಮರಣ ಶಾಸನದಲ್ಲಿ ಯಾವ ಯಾವ ಆಸ್ತಿಗಳನ್ನು ಯಾರ ಯಾರ ಹೆಸರಿಗೆ ಬರೆದಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ನನ್ನ ತಂದೆಗೆ ಬರೆದ ಜಮೀನನ್ನು ಹೊರತು ಪಡಿಸಿ ಉಳಿದ ಆಸ್ತಿಯನ್ನು 3 ನೇ ಹೆಂಡತಿ ನಿಂಗಮ್ಮನ ಮಕ್ಕಳಿಗೆ ಬರೆದಿರುತ್ತಾರೆ. ಸದರಿ ನಿಂಗಮ್ಮ ಈ ದಾವೆಯ 1

ನೇ ಪ್ರತಿವಾದಿಯಾಗಿರುತ್ತಾರೆ. 1 ನೇ ಪ್ರತಿವಾದಿ ನಿಂಗಮ್ಮ ಬದುಕಿರುವುದಿಲ್ಲ. ನಿಂಗಮ್ಮನ ಮಕ್ಕಳಲ್ಲಿ 9 ನೇ ಪ್ರತಿವಾದಿ ಓಬನಾಯಕ ಇವರು ಈಗ 1 ವರ್ಷಗಳ ಹಿಂದೆ ತೀರಕೊಂಡಿರುತ್ತಾರೆ. ವಿಲ್ ಮುಖಾಂತರ ಬಂದ ಆಸ್ತಿಗಳಲ್ಲಿ ಕೆಲವು ಆಸ್ತಿಗಳು ಮಾರಾಟ ಆಗಿರುತ್ತವೆ. ಉಳಿದ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡಿದ್ದೇವೆ. 2015-16 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ.

ಸರ್ವೆ ನಂ.32 ರಲ್ಲಿ ಮಾತ್ರ ಆಸ್ತಿಯನ್ನು ವಿಭಜನೆ ಮಾಡಿಕೊಂಡಿರುತ್ತೇವೆ ಎಷ್ಟೆಷ್ಟು ವಿಭಾಗ ಮಾಡಿಕೊಂಡಿರುತ್ತೆವೆ ಎಂದು ಗೊತ್ತಿಲ್ಲ . ವಿಭಜನೆ ಮಾಡಿಕೊಂಡ ಆಸ್ತಿಗಳನ್ನು ಬಿಟ್ಟು ಉಳಿದ ಆಸ್ತಿಗಳನ್ನು ಮಾರಾಟ ಮಾಡಿರುತ್ತೆವೆ. ವಿಲ್ ನ್ನು ಈ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಹಾಜರು ಪಡಿಸಿರಬಹುದು ಎಂದು ಹೇಳುತ್ತಾರೆ. ನಿಪಿ-1 ರ ವಂಶವೃಕ್ಷಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಅದನ್ನು ತಾಲ್ಲೂಕು ಕಛೇರಿಯಲ್ಲಿ ಮಾಡಿಸಿರುತ್ತೇನೆ . ನಿಪಿ-1 ನ್ನು ದೃಢೀಕರಿಸಿದವರು ಯಾರು ಎಂದು ಈಗ ನನಗೆ ಗೊತ್ತಿರುವುದಿಲ್ಲ. ನಿಪಿ-1 ಕ್ಕೆ ವಂಶವೃಕ್ಷ ನೀಡಿದ ಸಮಯದಲ್ಲಿ ನಾನು ಸಹಿ ಮಾಡಿರುತ್ತೇನೆ. ನಿಪಿ-1 ರಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ.

ನಿಪಿ-2 ರಲ್ಲಿ ಕಾಣಿಸಿರುವ ಯರಿಜೋಗನಾಯಕ ನಮ್ಮ ತಾತ. ನಿಪಿ-28 ರ ಓಎಸ್ ನಂ.65/2009 ನ್ನು ನಾನು ಮತ್ತು ನಮ್ಮ ಸಹೋದರರು 3 ನೇ ಪ್ರತಿವಾದಿ ಮತ್ತು ಅವರ ಮಕ್ಕಳ ವಿರುದ್ಧ ಸಲ್ಲಿಸಿರುತ್ತೇವೆ. ಸದರಿ ದಾವೆಯಲ್ಲಿ ನಮ್ಮ ಪ್ರತಿನಿಧಿಸಿದ್ದ ವಕೀಲರು ತೀರಿಕೊಂಡಿದ್ದು ನಾವು ಮತ್ತೆ ಈ ದಾವೆ ಸಲ್ಲಿಸಿರುತ್ತೇವೆ. ಆ ದಾವೆಯನ್ನು ನಾವು ವಾಪಸ್ಸು ಪಡೆದುಕೊಂಡಿರುತ್ತೇವೆ. ನಮ್ಮ ತಾತ ಯರಿಜೋಗನಾಯಕ ಮತ್ತು ನನ್ನ ತಂದೆ ಓಬನಾಯಕ ಅವರ ಜೀವಿತ ಕಾಲದಲ್ಲಿ ವಿಶ್ವಾಸದಿಂದ ಇದ್ದರೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು)**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.